ಅನುಕೂಲವಾಗುತ್ತದೆ. ಬೆಂಗಳೂರಿನ ನಂಜಂಗಿ ಬ್ಯಾಂಕ್ ಹತ್ತಿರವಿರುವ ಮಿಲ್ಕ್ ಷೆಡ್ ಏರಿಯಾಗಳಲ್ಲಿ ಮುರಾ ಎಮ್ಮೆಗಳನ್ನು ಸಾಕಿ, ಸಸಿ ಸಂತತಿ ಮಾಡುವ ಹಾಗೆ ಅವನ್ನು ವೃದ್ಧಿಮಾಡುವುದಕ್ಕೆ ಆಗುವುದಿಲ್ಲವೇ?

Sri R. M. PATIL.—This is entirely a different question and suggestion. It does not come within the purview of this question.

Smt. S. H. MARKER.—In answer to (*c*) you say that action is taken under the ordinary provisions of the Municipal and Cattle Trespass Acts. I wonder if the Government is aware of the fact that the Municipality absolutely does not think in the matter : in fact, it is the Police who come and round up the cattle. When we complain, Government make a sort of demarcation of responsibility between the Police and the Municipality. May I know who actually has to take action in this matter ?

Sri R. M. PATIL.—The present Act in force is suffering from some difficulties, and it has to be amended. Therefore, the Corporation is not in a position to implement the provisions of that Act effectively.

Triple Benefit Scheme to the Aided Secondary School Teachers

49. Sri Y. S. PATIL (Graduates' Constituency).—

Will the Minister for Agriculture and Education be pleased to state : —

(*a*) the number of Government Aided Secondary Schools where the teachers entitled to the Triple Benefit Scheme have not received any benefit so far ;

(*b*) the reasons for not providing such benefits to those institutions ?

A.—Sri K. V. SHANKARA GOWDA (Minister for Agriculture and Education).—

(*a*) 344—List is placed on the table of the House.*

(*b*) Delay in sending the option of teachers for the revised scheme.

ಶ್ರೀ ವೈ. ಎಸ್. ಪಾಟೀಲ್.—ಧಾರವಾಡದಲ್ಲಿರತಕ್ಕ ಅನೇಕ ಶಾರಾ ಸಂಸ್ಥೆಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಒಂದೆರಡು ವರ್ಷಗಳ ಮುಂಚಿತವಾಗಿಯೇ ಸಂಪೂರ್ಣ ಪಟ್ಟಿಯನ್ನು ವ್ಯಕ್ತಪಡಿಸಿದ್ದರೂ ಈ ತ್ರಿಲಾಭಯೋಜನೆಯ ಸಾಕರ್ಯ ಅವುಗಳಿಗೆ ಕೊಟ್ಟಿಲ್ಲ. ಕಾರಣವೇನು?

ಶ್ರೀ ಕೆ. ವಿ. ಶಂಕರಗೌಡ.—ಕೆಲವು ಕಡೆಗಳಿಂದ ಅಲ್ಲಿನ ಉಪಾಧ್ಯಾಯರಿಂದ ಈ ತ್ರಿಲಾಭ ಯೋಜನೆಯನ್ನು ಒಪ್ಪಿಕೊಂಡಿದ್ದೇವೆಂದು ಒಪ್ಪಿಗೆ ಬಂದಿಲ್ಲ. ಆದ್ದರಿಂದ ಇದು ನಿಧಾನವಾಗಿದೆ. ಅವರಿಂದ ಒಪ್ಪಿಗೆ ಬಂದ ತಕ್ಷಣ ಈ ಯೋಜನೆಯ ಲಾಭವನ್ನು ಅವರಿಗೂ ಜಾರಿಗೆ ಕೊಡಲಾಗುತ್ತದೆ.

* Copy placed in the Mysore Legislature Library.

ಶ್ರೀ ವೈ. ಎಸ್. ಪಾಟೀಲ್.—ಕೆಲವರಿಂದ ಸಂಪೂರ್ಣವಾಗಿ ಒಪ್ಪಿಗೆ ಬಂದು ಒಂದೂವರೆ ವರ್ಷಗಳಾಗಿವೆ. ಆವರಿಗಾದರೂ ಬರಲಿಲ್ಲ, ಕಾರಣವೇನು ?

ಶ್ರೀ ಕೆ. ವಿ. ಶಂಕರಗೌಡ.—ಈ ತ್ರಿರಾಭಯೋಜನೆಯ ಬಗ್ಗೆ ಬೊಂಬಾಯಿ ಏರಿಯಾದೊಳಗೆ ಸಂಬಂಧಪಟ್ಟ ಹಾಗೆ ಮೊನ್ನೆತಾನೆ ಆಕ್ಟ್ ತಿದ್ದುಪಡಿಯಾಯಿತು. ಆದ್ದರಿಂದ ಇದು ಸ್ವಲ್ಪ ನಿಧಾನವಾಗಿದೆ.

ಶ್ರೀ ವೈ. ಎಸ್. ಪಾಟೀಲ್.—ತ್ರಿರಾಭಯೋಜನೆಯ ಬಗ್ಗೆ ಕೆಲವೊಂದು ಫಾರಮ್‌ಗಳು ಏನಿವೆ ಅವು ಶ್ರೀಮಾನ್ ಕಂಠಿಯವರ ಕಾಲದಿಂದಲೂ ಇಲ್ಲಿಯವರೆಗೆ 6 ಸಾರಿ ಬದಲಾವಣೆ ಮಾಡಿದ್ದಾರೆ ; ಕಾರಣವೇನು ?

ಶ್ರೀ ಕೆ. ವಿ. ಶಂಕರಗೌಡ.—ಈ ತ್ರಿರಾಭಯೋಜನೆ 1963ನೇ ಇಸವಿಯಲ್ಲಿ ಬಂತು. ಇದರಲ್ಲಿ ಕೆಲವು ನೂನತೆಗಳು ಬಂದಿವೆ ಎಂದು ಕೆಲವು ಉಪಾಧ್ಯಾಯರಿಂದ ಮನವಿಗಳು ಬಂದುವು ಅವನ್ನು 1966ನೇ ಇಸವಿಯಲ್ಲಿ ಸರಿಪಡಿಸಲಾಯಿತು. ಆಮೇಲೆ 1967ರಲ್ಲಿ ಕೆಲವು ಉಪಾಧ್ಯಾಯರುಗಳ ಮನವಿಗಳ ಮೇರೆ ಮತ್ತೆ ಕೆಲವು ಬದಲಾವಣೆಗಳನ್ನು ಮಾಡಬೇಕಾಯಿತು.

ಶ್ರೀ ವೈ. ಎಸ್. ಪಾಟೀಲ್.—ಈಗಾಗಲೇ ಉಪಾಧ್ಯಾಯರು ಕಳುಹಿಸಿಕೊಟ್ಟಿರತಕ್ಕ ಫಾರಮ್‌ಗಳಲ್ಲಿ ಏನು ತಮ್ಮ ಸಮ್ಮತಿ ಕಳುಹಿಸಿದ್ದಾರೆಯೋ ಆ ಪ್ರಕಾರವೇ ಅವರಿಗೆ ತ್ರಿರಾಭಯೋಜನೆಯು ಲಾಭವನ್ನು ಕೊಡುವ ಖಾತರಿ ಕೊಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಏನು ಬದಲಾವಣೆ ಮಾಡಿದರೂ ಕೂಡ ಅದು ಉಪಾಧ್ಯಾಯರ ಅನುಕೂಲಕ್ಕೋಸ್ಕರ ಆಗುತ್ತದೆ. ಹೆಚ್ಚಿನ ಅನುಕೂಲ ಕಂಡುಬಂದರೆ ಬದಲಾವಣೆ ಮಾಡತಕ್ಕ ಅವಕಾಶ ಇದೆ.

ಶ್ರೀ ವೈ. ಎಸ್. ಪಾಟೀಲ್.—ಈಗ ಒಂದು ಫಾರಮ್ ಬದಲಾವಣೆಯಾಗಿ, ಆ ಫಾರಂನಲ್ಲಿ ಉಪಾಧ್ಯಾಯರು ತಮ್ಮ ಸಮ್ಮತಿಯನ್ನು ಸೂಚಿಸಿ ಸರ್ಕಾರಕ್ಕೆ ಕಳುಹಿಸಿ ಅದು ಸರ್ಕಾರಕ್ಕೆ ಮುಟ್ಟುವುದರಲ್ಲಿ ಮತ್ತೆ ಬದಲಾವಣೆಮಾಡುತ್ತಾರೆ. ಇದರಿಂದ ಇದು ಬದಲಾವಣೆ ಮಾಡುವುದರಲ್ಲಿಯೇ ಉಳಿದು ಈ ಯೋಜನೆಯ ಲಾಭ ಉಪಾಧ್ಯಾಯರಿಗೆ ಮುಟ್ಟುವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಆ ತರಹ ಆಗಿಲ್ಲ. ಕೆಲವು 3 ವರ್ಷಕ್ಕೆ ಒಂದು ಸಾರಿ ಬದಲಾವಣೆ ಆಗಿರಬಹುದು. ಇನ್ನು ಮೇಲೆ ಹೆಚ್ಚು ಬದಲಾವಣೆ ಆಗಲಾರದು.

ಶ್ರೀ ವೈ. ಎಸ್. ಪಾಟೀಲ್. —ಈಗಾಗಲೇ ಉಪಾಧ್ಯಾಯರು ಕಳುಹಿಸಿಕೊಟ್ಟಿರತಕ್ಕ ಫಾರಂಗಳನ್ನು ಆಫೀಸಿನಲ್ಲಿ ತಡೆಹಿಡಿಯುತ್ತಿದ್ದಾರೆಂದು ತಪುಗೆ ತಿಳಿದುಬಂದಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—ಕೊಳ್ಳೇಗಾಲದ ಸೆಕೆಂಡರಿ ಶಾಲೆಯ 3 ಜನ ಉಪಾಧ್ಯಾಯರು ನಿವೃತ್ತರಾಗಿ 5-6 ವರ್ಷಗಳಾಗಿದ್ದರೂ ಕೂಡ ಅವರಿಗೆ ಈ ತ್ರಿರಾಭಯೋಜನೆಯ ಬೆನಿಫಿಟ್ ಬಂದಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಕೊಳ್ಳೇಗಾಲದ 3 ಜನ ಉಪಾಧ್ಯಾಯರ ವಿಷಯ ಸ್ವಲ್ಪ ತಾಪತ್ರಯವಾಗಿದೆ. ಅವರಿಗೆ ಸಂಬಂಧಪಟ್ಟ ಕೆಲವು ವಿವರಗಳ ಸಂಬಂಧದಲ್ಲಿ ಪತ್ರವ್ಯವಹಾರ ನಡೆಯುತ್ತಿದೆ. ಆದ್ದರಿಂದ ಅದು ಸ್ವಲ್ಪ ನಿಧಾನವಾಗಿದೆ. ಬಾಕಿ ಎಲ್ಲಾ ಸಂದರ್ಭಗಳಲ್ಲಿಯೂ ಈ ಸೌಲಭ್ಯವನ್ನು ಕೊಡಲಾಗಿದೆ.

ಶ್ರೀ ವೈ ಎಸ್. ಪಾಟೀಲ್.—ಈಗ ಉಪಾಧ್ಯಾಯರು ಒಂದು ಸಾರಿ ಕಳುಹಿಸಿಕೊಟ್ಟ ಫಾರಂ ಸರ್ಕಾರಕ್ಕೆ ಮುಟ್ಟುವುದರಲ್ಲಿ ಎರಡನೇ ಬದಲಾವಣೆ ಆಗಿದ್ದರೆ ಮತ್ತೆ ಅವರು ತಮ್ಮ ಒಪ್ಪಿಗೆ ಕೊಟ್ಟು ಸರ್ಕಾರಕ್ಕೆ ಫಾರಂ ಕಳುಹಿಸಿ ಕೊಡಬೇಕೇ ಹೇಗೆ ?

ಶ್ರೀ ಕೆ. ವಿ. ಶಂಕರಗಾಮ.—ಆ ರೀತಿ ಫಾರಂ ಹೋಗಿ ಮುಟ್ಟುವುದರಲ್ಲಿ ಮತ್ತೆ ಬದಲಾವಣೆಯಾಗಿಲ್ಲ. ಅದ್ದರಿಂದ ಕೆಲವು ಬದಲಾವಣೆ ಆಗಿದ್ದರೆ ಅದಕ್ಕನುಗುಣವಾಗಿ ಉಪಾಧ್ಯಾಯರು ತಮ್ಮ ಒಪ್ಪಿಗೆಯನ್ನು ಕೊಡಬೇಕಾಗುತ್ತದೆ.

ಶ್ರೀ ವೈ. ಎಸ್. ಪಾಟೀಲ್.—ಆ ರೀತಿ ಮತ್ತೆ ಫಾರಂ ಬದಲಾವಣೆಯಾಗಿದ್ದರೆ, ಆ ಪ್ರಕಾರವಾಗಿ ಅಪ್ಲಿಕೇಷನ್ ಕಳುಹಿಸಿಕೊಡಬೇಕೆಂದು ಸಂಬಂಧಪಟ್ಟವರಿಗೆ ಸರ್ಕಾರದವರು ತಿಳಿಸುತ್ತಾರೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಅದು ಗೆಜೆಟ್‌ನಲ್ಲಿ ಪ್ರಕಟವಾಗುತ್ತದೆ. ಎಲ್ಲರಿಗೂ ತಿಳಿಸುವಂತೆ ಸರ್ಕ್ಯುಲರ್ ಕಳುಹಿಸಲಾಗುತ್ತದೆ.

ಶ್ರೀ ಎಸ್. ಪಿ. ರಾಜಣ್ಣ.—ಈಗಾಗಲೇ ಕೆಲವರು ಫಾರಂಗಳನ್ನು ಕಳುಹಿಸಿಕೊಟ್ಟು ಅವು ಈಗ ಒಂದು ವರ್ಷದಿಂದ ಕೊಳೆಯುತ್ತಿವೆ ಎಂಬುದು ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಅವನ್ನು ವಿಚಾರಮಾಡುತ್ತೇನೆ.

ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—ಆ ಮೂರು ಜನ ಉಪಾಧ್ಯಾಯರುಗಳ ವಿವರಗಳು ಬಂದಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆ ಉಪಾಧ್ಯಾಯರ ವಿವರಗಳು ಬಂದು ಸಾಕಷ್ಟು ಕಾಲ ಆಗಿದೆ. ಈಗಾಗಲೇ ಇಬ್ಬರು ಉಪಾಧ್ಯಾಯರುಗಳು ನಕ್ಕು ಹೋಗಿದ್ದಾರೆ ಆದ್ದರಿಂದ ಆ ಉಪಾಧ್ಯಾಯರುಗಳಿಗೆ ಬರಬೇಕಾಗಿದ್ದ ಹಣವನ್ನು ಅವರ ಕುಟುಂಬದವರಿಗೆ ಕೊಡುವಂತೆ ಅನ್ಯಯಮಾಡಿ ಆ ಮೂರು ಜನ ಉಪಾಧ್ಯಾಯರುಗಳಿಗೆ ಕೊಡಬೇಕಾಗಿರುವಕ್ಕ ಪೆನ್‌ಷನ್ ಬೆನಿಫಿಟ್ ಅನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ವಿವರಗಳು ಬಂದಿದ್ದರೆ ಕೊಡುವುದಕ್ಕೆ ತಾಪತ್ರಯವಿಲ್ಲ. ಅದು ಬಂದಿವ್ವರೆ ಆದಷ್ಟು ಜಾಗ್ರತೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

Mr. CHAIRMAN.—Sri Keshava Rao Nitturkar may put question No. 51.

Police Station at Rajeshwar

51. Sri KESHAVA RAO NITTURKAR (Teachers' Constituency) [On behalf of SRI S. G. KHELGI (Local Authorities' Constituency)].—

Will the Minister for Home and Municipal Administration be pleased to state :—

(*a*) whether Government have received any proposal on the Superintendent of Police, Bidar for establishing Police Station at Rajeshwar in Basavakalyan ;

(*b*) If so, the steps they have taken so far, in this regard ?

A.—Sri R. M. PATIL (Minister for Home and Municipal Administration).—

(*a*) Yes.

(*b*) Government consider that there is no justification for sanction of a new Police Station at Rajeshwar.

Sri KESHAVA RAO NITTURKAR.—What are the reasons that prompted the Government not to establish a Police Station at Rajeshwar in Basavakalyan ? How are you justified in not taking a decision ?

† Sri R. M. PATIL.—There are no crimes sufficient in number in order to establish one more Police Station. The Police Stations at Basavakalyan and Humnabad have no sufficient number of crimes, though they areas in which these police stations are situated are vast in area. Therefore, there is no need for the establishment of a Police Station at Rajeswar.